# ವಿದೇಶಿ ವಿವಾಹ ಅಧಿನಿಯಮ, 1969

(1969ರ ಅಧಿನಿಯಮ ಸಂಖ್ಯೆ 33)

[31ನೇ ಆಗಸ್ಟ್, 1969]

ಭಾರತದ ನಾಗರಿಕರು ಭಾರತದ ಹೊರಗೆ ಮಾಡಿಕೊಳ್ಳುವ ವಿವಾಹಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಇಪ್ಪತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು:- ಈ ಅಧಿನಿಯಮವನ್ನು ವಿದೇಶಿ ವಿವಾಹ ಅಧಿನಿಯಮ, 1969 ಎಂದು ಕರೆಯತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದಹೊರತು,-

(ಎ) "ನಿಷಿದ್ಧ ಬಾಂಧವ್ಯ ಶ್ರೇಣಿಗಳು" ಎಂಬ ಪದಾವಳಿಯು ವಿಶೇಷ ವಿವಾಹ ಅಧಿನಿಯಮ, 1954 (1954ರ 43) ರಲ್ಲಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿ) ವಿವಾಹ ಅಧಿಕಾರಿಯ ಸಂಬಂಧದಲ್ಲಿ "ಜಿಲ್ಲೆ" ಎಂದರೆ ಅವನು ಯಾವ ಪ್ರದೇಶದಲ್ಲಿ ತನ್ನ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆಯೋ ಆ ಪ್ರದೇಶ;

(ಸಿ) "ವಿದೇಶ" ಎಂದರೆ ಭಾರತದ ಹೊರಗಿರುವ ದೇಶ ಅಥವಾ ಸ್ಥಳ, ಮತ್ತು ಇದು ಅಂಥ ದೇಶ ಅಥವಾ ಸ್ಥಳದ ರಾಜ್ಯ ಕ್ಷೇತ್ರೀಯ ಸಮುದ್ರದಲ್ಲಿ ತತ್ಕಾಲದಲ್ಲಿರುವ ಹಡಗನ್ನೂ ಒಳಗೊಳ್ಳುತ್ತದೆ;

(ಡಿ) "ವಿವಾಹಾಧಿಕಾರಿ" ಎಂದರೆ 3ನೇ ಪ್ರಕರಣದ ಮೇರೆಗೆ ವಿವಾಹ ಅಧಿಕಾರಿಯಾಗಿ ನೇಮಕಗೊಂಡ ವ್ಯಕ್ತಿ;

(ಇ) ವಿವಾಹಾಧಿಕಾರಿಯ ಸಂಬಂಧದಲ್ಲಿ "ಅಧಿಕೃತ ಗೃಹ" ಎಂದರೆ-

(i) ಅಧಿಕಾರಿಯು ವಾಸಿಸುವ ಅಧಿಕೃತ ಗೃಹ;

(ii) ಅಧಿಕಾರಿಯು ಕಾರ್ಯ ನಿರ್ವಹಿಸುವ ಕಚೇರಿ;

(iii) ನಿಯಮಿಸಲಾದ ಸ್ಥಳ; ಮತ್ತು

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

3. ವಿವಾಹಾಧಿಕಾರಿಗಳು:- ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಭಾವಿಸುವಂಥ ತನ್ನ ರಾಜತಾಂತ್ರಿಕ ಅಥವಾ ಕೌನ್ಸುಲರ್ ಅಧಿಕಾರಿಗಳನ್ನು ಯಾವುದೇ ವಿದೇಶಕ್ಕೆ ವಿವಾಹಾಧಿಕಾರಿಗಳಾಗಿ ನೇಮಕ ಮಾಡಬಹುದು.

ವಿವರಣೆ:- ಈ ಪ್ರಕರಣದಲ್ಲಿ "ರಾಜತಾಂತ್ರಿಕ ಅಧಿಕಾರಿ" ಎಂದರೆ ರಾಯಭಾರಿ, ರಾಜದೂತ, ಮಂತ್ರಿ, ಹೈ ಕಮೀಷನರು, ಕಮೀಷನರು, ಚಾರ್ಜ್ ಡಿ ಅಫೇರ್ಸ್ ಅಥವಾ ಇತರ ರಾಜತಾಂತ್ರಿಕ ಪ್ರತಿನಿಧಿ ಅಥವಾ ರಾಜದೂತವಾಸದ ಅಥವಾ ಹೈ ಕಮೀಷನ್ನಿನ ಸಲಹೆಗಾರ ಅಥವಾ ಕಾರ್ಯದರ್ಶಿ.

## ಅಧ್ಯಾಯ - II

### ವಿದೇಶಿ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದು

4. ವಿದೇಶಿ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ ಸಂಬಂಧಿಸಿದ ಷರತ್ತುಗಳು:- ವಿವಾಹದ ಪಕ್ಷಕಾರರಲ್ಲಿ ಕಡೇಪಕ್ಷ ಯಾರಾದರೂ ಒಬ್ಬರು ಭಾರತದ ನಾಗರೀಕರಾಗಿದ್ದು, ವಿವಾಹದ ಕಾಲದಲ್ಲಿ ಕೆಳಕಂಡ ಷರತ್ತುಗಳನ್ನು ಪೂರೈಸಿದ್ದರೆ, ಈ ಅಧಿನಿಯಮದ ಮೇರೆಗೆ ವಿದೇಶದಲ್ಲಿನ ವಿವಾಹಾಧಿಕಾರಿಯು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬಹುದು ಅಥವಾ ಅವನ ಸಮ್ಮುಖದಲ್ಲಿ ವಿವಾಹವು ವಿಧಿವತ್ತಾಗಿ ನಡೆಯಬಹುದು. ಆ ಷರತ್ತುಗಳೆಂದರೆ,-

(ಎ) ವಿವಾಹದ ಯಾವ ಪಕ್ಷಕಾರನಿಗೇ ಆಗಲಿ ಜೀವಂತ ಗಂಡನಾಗಲಿ ಹೆಂಡತಿಯಾಗಲಿ ಇರಬಾರದು;

(ಬಿ) ವಿವಾಹದ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ಹುಟ್ಟು ದಡ್ಡ ಅಥವಾ ಹುಚ್ಚನಾಗಿರಬಾರದು;

(ಸಿ) ವಿವಾಹ ಕಾಲದಲ್ಲಿ ವರನಿಗೆ ಇಪ್ಪತ್ತೊಂದು ವರ್ಷ ವಯಸ್ಸು ಮತ್ತು ವಧುವಿಗೆ ಹದಿನೆಂಟು ವರ್ಷ ವಯಸ್ಸು ತುಂಬಿರಬೇಕು;

(ಡಿ) ಪಕ್ಷಕಾರನು ನಿಷಿದ್ಧ ಬಾಂಧವ್ಯ ಶ್ರೇಣಿಗಳಲ್ಲಿರಬಾರದು:

ಪರಂತು, ಪಕ್ಷಕಾರರಲ್ಲಿ ಕಡೇಪಕ್ಷ ಯಾರಾದರೂ ಒಬ್ಬರಿಗೆ ಸಂಬಂಧಪಡುವ ವೈಯಕ್ತಿಕ ಕಾನೂನು ಅಥವಾ ಸಂಪ್ರದಾಯವು ಅವರ ವಿವಾಹವನ್ನು ಅಂಗೀಕರಿಸುವುದಾದರೆ, ಅವರು ನಿಷಿದ್ಧ ಶ್ರೇಣಿಯೊಳಗಿದ್ದರೂ, ಅಂಥ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬಹುದು.

5. ಉದ್ದೇಶಿತ ವಿವಾಹದ ಬಗ್ಗೆ ನೋಟೀಸು:- ಈ ಅಧಿನಿಯಮದ ಮೇರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಉದ್ದೇಶಿಸಿದಾಗ, ವಿವಾಹದ ಪಕ್ಷಕಾರರು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಒಂದು ಲಿಖಿತ ನೋಟೀಸನ್ನು, ಅಂಥ ನೋಟೀಸನ್ನು ಕೊಡುವ ದಿನಾಂಕಕ್ಕೆ ನಿಕಟಪೂರ್ವದ ಮೂವತ್ತು ದಿನಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ವಾಸವಾಗಿದ್ದಂಥ ಜಿಲ್ಲೆಯ ವಿವಾಹಾಧಿಕಾರಿಗೆ ಕೊಡತಕ್ಕದ್ದು ಮತ್ತು ಪಕ್ಷಕಾರರು ಅಲ್ಲಿ ಹಾಗೆ ವಾಸಿಸುತ್ತಿದ್ದರೆಂದು ಆ ನೋಟೀಸಿನಲ್ಲಿ ಸೂಚಿಸತಕ್ಕದ್ದು.

6. ವಿವಾಹದ ನೋಟೀಸಿನ ಪುಸ್ತಕ:- 5ನೇ ಪ್ರಕರಣದ ಮೇರೆಗೆ ಕೊಡಲಾದ ಎಲ್ಲ ನೋಟೀಸುಗಳನ್ನು ವಿವಾಹಾಧಿಕಾರಿಯು ತನ್ನ ಕಚೇರಿಯ ದಾಖಲೆಗಳಲ್ಲಿ ಇಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ನೋಟೀಸಿನ ಒಂದು ಯಥಾ ಪ್ರತಿಯನ್ನು ಆ ಉದ್ದೇಶಕ್ಕಾಗಿ ನಿಯಮಿಸಲಾಗಿರುವ "ವಿವಾಹ ನೋಟೀಸು ಪುಸ್ತಕ" ಎಂದು ಕರೆಯಲಾಗುವ ಪುಸ್ತಕದಲ್ಲಿ ಕೂಡಲೇ ಸೇರಿಸತಕ್ಕದ್ದು ಮತ್ತು ಅಂಥ ಪುಸ್ತಕವನ್ನು ಪರಿಶೀಲಿಸಲು ಅಪೇಕ್ಷಿಸುವ ಯಾರೇ ವ್ಯಕ್ತಿಯು ಫೀಜಿಲ್ಲದೆ ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲಿಸಲು ಅವನಿಗೆ ಅವಕಾಶವಿರತಕ್ಕದ್ದು.

7. ನೋಟೀಸಿನ ಪ್ರಕಟಣೆ:- 5ನೇ ಪ್ರಕರಣದ ಮೇರೆಗೆ ವಿವಾಹಾಧಿಕಾರಿಗೆ ನೋಟೀಸನ್ನು ಕೊಟ್ಟಿರುವಲ್ಲಿ, ಅವನು,-

(ಎ) ಅದರ ಒಂದು ಪ್ರತಿಯನ್ನು ತನ್ನ ಕಚೇರಿಯ ಎದ್ದುಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ; ಮತ್ತು

(ಬಿ) ಭಾರತದಲ್ಲಿ ಮತ್ತು ಪಕ್ಷಕಾರರು ಸಾಮಾನ್ಯವಾಗಿ ವಾಸಿಸುವ ದೇಶ ಅಥವಾ ದೇಶಗಳಲ್ಲಿ, ನಿಯಮಿಸಲಾದ ರೀತಿಯಲ್ಲಿ

- ಅದನ್ನು ಪ್ರಕಟಿಸುವ ವ್ಯವಸ್ಥೆ ಮಾಡತಕ್ಕದ್ದು.

8. ವಿವಾಹಕ್ಕೆ ಆಕ್ಷೇಪಣೆ:- (1) 7ನೇ ಪ್ರಕರಣದ ಮೇರೆಗೆ ನೀಡಿದ ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳು ಮುಗಿಯುವುದಕ್ಕೆ ಮುಂಚೆ, ಯಾರೇ ವ್ಯಕ್ತಿಯು 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚಿನ ಷರತ್ತುಗಳನ್ನು ವಿವಾಹವು ಉಲ್ಲಂಘಿಸುತ್ತದೆಂಬ ಕಾರಣದ ಮೇಲೆ ಅದನ್ನು ಆಕ್ಷೇಪಿಸಬಹುದು.

ವಿವರಣೆ:- 7ನೇ ಪ್ರಕರಣದ (ಎ) ಖಂಡದ ಮೇರೆಗೆ ನೋಟೀಸನ್ನು ಅಂಟಿಸುವ ಮೂಲಕ ಪ್ರಕಟಿಸಿದ ಮತ್ತು ಆ ಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಿಸಿದ ರೀತಿಯಲ್ಲಿ, ನೋಟೀಸನ್ನು ಪ್ರಕಟಿಸಿದ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಈ ಉಪಪ್ರಕರಣದ ಉದ್ದೇಶಗಳಿಗಾಗಿ ಮೂವತ್ತು ದಿನಗಳ ಅವಧಿಯನ್ನು, (ಬಿ) ಖಂಡದ ಮೇರೆಗೆ ನೋಟೀಸನ್ನು ಪ್ರಕಟಿಸಿದ ದಿನಾಂಕದಿಂದ ಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ಅಂಥ ಪ್ರತಿಯೊಂದು ಆಕ್ಷೇಪಣೆಯನ್ನು, ಆಕ್ಷೇಪಣೆ ಮಾಡುವ ವ್ಯಕ್ತಿಯು ಅಥವಾ ಅವನ ಪರವಾಗಿ ಯಥೋಚಿತವಾಗಿ ರುಜು ಮಾಡಲು ಅಧಿಕಾರ ಪಡೆದ ಯಾರೇ ವ್ಯಕ್ತಿಯು ರುಜು ಮಾಡಿ ಲಿಖಿತದಲ್ಲಿ ಸಲ್ಲಿಸತಕ್ಕದ್ದು ಮತ್ತು ಆಕ್ಷೇಪಣೆಗಳಿಗೆ ಕಾರಣಗಳನ್ನು ಸೂಚಿಸತಕ್ಕದ್ದು; ಮತ್ತು ವಿವಾಹಾಧಿಕಾರಿಯು ಆಕ್ಷೇಪಣೆಯ ಸ್ವರೂಪವನ್ನು ತನ್ನ ಬಳಿ ಇರುವ ವಿವಾಹದ ನೋಟೀಸು ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು.

9. ಯಾವ ಆಕ್ಷೇಪಣೆಯೂ ಇರದಿದ್ದರೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದು:- ಉದ್ದೇಶಿತ ವಿವಾಹದ ಬಗ್ಗೆ 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವ ಆಕ್ಷೇಪಣೆಯೂ ಇರದಿದ್ದರೆ, ಆ ಅವಧಿಯು ಮುಗಿದ ಮೇಲೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬಹುದು.

10. ಆಕ್ಷೇಪಣೆಯನ್ನು ಸ್ವೀಕರಿಸಿದ ಮೇಲೆ ಕಾರ್ಯವಿಧಾನ:- (1) ಒಂದು ಉದ್ದೇಶಿತ ವಿವಾಹಕ್ಕೆ 8ನೇ ಪ್ರಕರಣದ ಮೇರೆಗೆ ಆಕ್ಷೇಪಣೆಯನ್ನು ಮಾಡಿರುವಲ್ಲಿ, ವಿವಾಹಾಧಿಕಾರಿಯು ತಾನು ಯುಕ್ತವೆಂದು ಭಾವಿಸುವಂಥ ರೀತಿಯಲ್ಲಿ ಆಕ್ಷೇಪಣೆಯ ವಿಷಯದ ಬಗ್ಗೆ ವಿಚಾರಣೆ ನಡೆಸುವವರೆಗೆ ಮತ್ತು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಅದು ತಡೆಯಾಗುವುದಿಲ್ಲವೆಂದು ಅಥವಾ ಆಕ್ಷೇಪಣೆಯನ್ನು ಮಾಡಿದ ವ್ಯಕ್ತಿಯು ಅದನ್ನು ಹಿಂತೆಗೆದುಕೊಂಡಿದ್ದಾನೆಂದು ಅವನಿಗೆ ಮನವರಿಕೆಯಾಗುವವರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸತಕ್ಕದ್ದಲ್ಲ.

(2) ಅಂಥ ಯಾವುದೇ ವಿಚಾರಣೆಯನ್ನು ನಡೆಸಿದ ತರುವಾಯ, ಯಾವುದೇ ಆಕ್ಷೇಪಣೆಯ ಬಗ್ಗೆ ವಿವಾಹಾಧಿಕಾರಿಗೆ ಸಂದೇಹವುಂಟಾದರೆ ಅವನು ಆ ವಿಷಯಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸುವಂಥ ವಿವರಣೆಯೊಡನೆ ಆ ದಾಖಲೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು; ಮತ್ತು ಕೇಂದ್ರ ಸರ್ಕಾರವು, ಆ ವಿಷಯದ ಬಗ್ಗೆ ಇನ್ನಷ್ಟು ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಸಲಹೆಯನ್ನು ಪಡೆದ ತರುವಾಯ ಅದರ ಬಗ್ಗೆ ವಿವಾಹಾಧಿಕಾರಿಗೆ ಲಿಖಿತದಲ್ಲಿ ತನ್ನ ತೀರ್ಮಾನವನ್ನು ಕೊಡತಕ್ಕದ್ದು ಮತ್ತು ಆ ವಿವಾಹಾಧಿಕಾರಿಯು ಕೇಂದ್ರ ಸರ್ಕಾರದ ತೀರ್ಮಾನಕ್ಕನುಸಾರವಾಗಿ ಕಾರ್ಯ ನಿರ್ವಹಿಸತಕ್ಕದ್ದು.

11. ವಿವಾಹಗಳು ಸ್ಥಳೀಯ ಕಾನೂನುಗಳನ್ನು ಉಲ್ಲಂಘಿಸದಿರುವುದು:- (1) ಉದ್ದೇಶಿತ ವಿವಾಹವು, ಅದನ್ನು ವಿಧಿವತ್ತಾಗಿ ನೆರವೇರಿಸಬೇಕಾದ ವಿದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನಿಷೇಧಿತವಾಗಿದ್ದರೆ, ವಿವಾಹಾಧಿಕಾರಿಯು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಈ ಅಧಿನಿಯಮದ ಮೇರೆಗೆ ಆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದನ್ನು ನಿರಾಕರಿಸಬಹುದು.

(2) ವಿವಾಹಾಧಿಕಾರಿಯು ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದು ಅಂತಾರಾಷ್ಟ್ರೀಯ ಕಾನೂನು ಅಥವಾ ರಾಷ್ಟ್ರಗಳ ಸೌಹಾರ್ದತೆಗೆ ಅಸಂಗತವಾಗುವುದೆಂದು ಅಭಿಪ್ರಾಯಪಟ್ಟರೆ, ಅವನು, ಆ ಆಧಾರದ ಮೇಲೆ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಈ ಅಧಿನಿಯಮದ ಮೇರೆಗೆ ಆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದನ್ನು ನಿರಾಕರಿಸಬಹುದು.

(3) ಈ ಪ್ರಕರಣದ ಮೇರೆಗೆ ವಿವಾಹಾಧಿಕಾರಿಯು ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದನ್ನು ನಿರಾಕರಿಸಿದಲ್ಲಿ, ಉದ್ದೇಶಿತ ವಿವಾಹದ ವಧೂ-ವರರಲ್ಲಿ ಯಾರಾದರೂ ಒಬ್ಬರು ಅಂಥ ನಿರಾಕರಣೆಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ನಿಯಮಿಸಲಾದ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು; ಮತ್ತು ಅಂಥ ಅಪೀಲಿನ ಮೇಲೆ ಕೇಂದ್ರ ಸರ್ಕಾರವು ಕೈಗೊಂಡ ತೀರ್ಮಾನಕ್ಕನುಸಾರವಾಗಿ ವಿವಾಹಾಧಿಕಾರಿಯು ಕ್ರಮ ಕೈಗೊಳ್ಳತಕ್ಕದ್ದು.

12. ಪಕ್ಷಕಾರರಿಂದ ಮತ್ತು ಸಾಕ್ಷಿದಾರರಿಂದ ಘೋಷಣೆ:- ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ ಮುಂಚೆ, ಪಕ್ಷಕಾರರು ಮತ್ತು ಮೂವರು ಸಾಕ್ಷಿದಾರರು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿರುವ ಘೋಷಣೆಗೆ ವಿವಾಹಾಧಿಕಾರಿಯ ಸಮ್ಮುಖದಲ್ಲಿ ಸಹಿ ಮಾಡತಕ್ಕದ್ದು ಮತ್ತು ಆ ಘೋಷಣೆಗೆ ವಿವಾಹಾಧಿಕಾರಿಯು ಮೇಲು ರುಜು ಮಾಡತಕ್ಕದ್ದು.

13. ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ ಸ್ಥಳ ಮತ್ತು ರೀತಿ:- (1) ಈ ಅಧಿನಿಯಮದ ಮೇರೆಗೆ ವಿವಾಹಾಧಿಕಾರಿಯು ನಡೆಸಬೇಕಾದ ಅಥವಾ ಅವನ ಸಮ್ಮುಖದಲ್ಲಿ ನಡೆಯಬೇಕಾದ ವಿವಾಹವನ್ನು ವಿವಾಹಾಧಿಕಾರಿಯ ಅಧಿಕೃತ ಗೃಹದಲ್ಲಿ ಬಹಿರಂಗವಾಗಿ, ನಿಯಮಿಸಲಾದ ವೇಳೆಯಲ್ಲಿ ಕಡೇಪಕ್ಷ ಮೂವರು ಸಾಕ್ಷಿದಾರರ ಸಮ್ಮುಖದಲ್ಲಿ ವಿಧಿವತ್ತಾಗಿ ನೆರವೇರಿಸತಕ್ಕದ್ದು.

(2) ಪಕ್ಷಕಾರರು ಆಯ್ಕೆ ಮಾಡಿಕೊಂಡ ಯಾವುದೇ ರೀತಿಯಲ್ಲಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬಹುದು:

ಪರಂತು, ವಿವಾಹಾಧಿಕಾರಿಯ ಮತ್ತು ಮೂವರು ಸಾಕ್ಷಿದಾರರ ಸಮ್ಮುಖದಲ್ಲಿ ಮತ್ತು ಪಕ್ಷಕಾರರಿಗೆ ತಿಳಿಯುವ ಯಾವುದೇ ಭಾಷೆಯಲ್ಲಿ ಪಕ್ಷಕಾರರಿಬ್ಬರೂ, "(ಎ) ಎಂಬ ನಾನು (ಬಿ) ಎಂಬ ನಿನ್ನನ್ನು ವಿಧಿಬದ್ಧ ಪತ್ನಿಯಾಗಿ (ಅಥವಾ ಪತಿಯಾಗಿ) ಸ್ವೀಕರಿಸಿದ್ದೇನೆ" ಎಂದು ಘೋಷಣೆ ಮಾಡಿದ ಹೊರತು ವಿವಾಹವು ಪೂರ್ಣವಾಗತಕ್ಕದ್ದಲ್ಲ ಮತ್ತು ಅವರಿಗೆ ಬಂಧನಕಾರಿಯಾಗತಕ್ಕದ್ದಲ್ಲ:

ಮತ್ತೂ ಪರಂತು, ಹಿಂದಿನ ಪರಂತುಕದಲ್ಲಿ ಉಲ್ಲೇಖಿಸಿದ ಘೋಷಣೆಯನ್ನು ವಿವಾಹಾಧಿಕಾರಿಗೆ ಅಥವಾ ಯಾರೇ ಸಾಕ್ಷಿದಾರರಿಗೆ ತಿಳಿಯದ ಭಾಷೆಯಲ್ಲಿ ಮಾಡಲಾಗಿರುವಲ್ಲಿ, ವಿವಾಹಾಧಿಕಾರಿಗೆ ಅಥವಾ ಸಂದರ್ಭಾನುಸಾರ ಅಂಥ ಸಾಕ್ಷಿದಾರರಿಗೆ ತಿಳಿಯುವ ಭಾಷೆಯಲ್ಲಿ ಆ ಘೋಷಣೆಯ ಅರ್ಥವನ್ನು ಪಕ್ಷಕಾರರಲ್ಲಿ ಯಾರಾದರೊಬ್ಬರು ವಿವರಿಸಿ ಹೇಳತಕ್ಕದ್ದು ಅಥವಾ ವಿವರಿಸಿ ಹೇಳುವ ವ್ಯವಸ್ಥೆ ಮಾಡತಕ್ಕದ್ದು.

14. ವಿವಾಹ ಪ್ರಮಾಣಪತ್ರ:- (1) ಈ ಅಧಿನಿಯಮದ ಮೇರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದಾಗಲೆಲ್ಲಾ, ವಿವಾಹಾಧಿಕಾರಿಯು ವಿವಾಹ ಪ್ರಮಾಣಪತ್ರವನ್ನು ಆ ಬಗ್ಗೆ ತಾನು ಇಡಬೇಕಾಗಿರುವ ವಿವಾಹ ಪ್ರಮಾಣಪತ್ರ ಪುಸ್ತಕ ಎಂದು ಕರೆಯಲಾಗುವ ಪುಸ್ತಕದಲ್ಲಿ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ನಮೂದಿಸತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರಕ್ಕೆ ಪಕ್ಷಕಾರರು ಮತ್ತು ಸಾಕ್ಷಿದಾರರು ಸಹಿ ಮಾಡತಕ್ಕದ್ದು.

(2) ವಿವಾಹಾಧಿಕಾರಿಯು ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿ ಪ್ರಮಾಣ ಪತ್ರವನ್ನು ನಮೂದಿಸಿದ ಮೇಲೆ, ಈ ಅಧಿನಿಯಮದ ಮೇರೆಗೆ ವಿವಾಹವು ವಿಧಿವತ್ತಾಗಿ ನೆರವೇರಿದ ಮತ್ತು ವಿವಾಹಪೂರ್ವದಲ್ಲಿ ಸಂಬಂಧಪಟ್ಟ ಪಕ್ಷಕಾರರ ವಾಸಸ್ಥಳ ಮತ್ತು ಸಾಕ್ಷಿದಾರರ ಸಹಿಗಳಿಗೆ ಸಂಬಂಧಿಸಿದಂತೆ ಎಲ್ಲ ವಿಧಿ-ವಿಧಾನಗಳನ್ನು ಪಾಲಿಸಲಾಗಿದೆಯೆಂಬುದಕ್ಕೆ ಈ ಪ್ರಮಾಣ ಪತ್ರವು ನಿರ್ಣಾಯಕ ಸಾಕ್ಷ್ಯವೆಂದು ಭಾವಿಸತಕ್ಕದ್ದು.

15. ಭಾರತದಲ್ಲಿ ವಿದೇಶಿ ವಿವಾಹದ ಸಿಂಧುತ್ವ:- ಈ ಅಧಿನಿಯಮದಲ್ಲಿರುವ ಇತರ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಿಧಿವತ್ತಾಗಿ ನೆರವೇರಿಸಿದ ವಿವಾಹವು, ಕಾನೂನು ರೀತ್ಯಾ ಸರಿಯಾದುದು ಮತ್ತು ಸಿಂಧುವಾದುದು ಆಗಿರತಕ್ಕದ್ದು.

16. ಆರು ತಿಂಗಳೊಳಗಾಗಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸದಿದ್ದಾಗ ಹೊಸ ನೋಟೀಸು:- 5ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ವಿವಾಹಾಧಿಕಾರಿಗೆ ವಿವಾಹದ ಬಗ್ಗೆ ನೋಟೀಸನ್ನು ಕೊಟ್ಟ ದಿನಾಂಕದಿಂದ ಆರು ತಿಂಗಳ ಒಳಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸದಿರುವಲ್ಲಿ ಅಥವಾ 10ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ವಿಷಯದ ದಾಖಲೆಯನ್ನು ಕಳುಹಿಸಿರುವಲ್ಲಿ ಅಥವಾ 11ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಿರುವಲ್ಲಿ ಸಂದರ್ಭಾನುಸಾರ, ಅಂಥ ವಿಷಯದ ಅಥವಾ ಅಪೀಲಿನ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಆ ನೋಟೀಸು ಮತ್ತು ಅದರಿಂದ ಉದ್ಭವಿಸುವ ಇತರ ಎಲ್ಲಾ ವ್ಯವಹರಣೆಗಳು ರದ್ದುಗೊಂಡಿವೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ವಿಧಿಸಿದ ರೀತಿಯಲ್ಲಿ ಹೊಸ ನೋಟೀಸನ್ನು ಕೊಡುವವರೆಗೆ ವಿವಾಹಾಧಿಕಾರಿಯು ಆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸತಕ್ಕದ್ದಲ್ಲ.

## ಅಧ್ಯಾಯ - III

## ಇತರ ಕಾನೂನುಗಳ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿದೇಶಿ ವಿವಾಹಗಳ ನೋಂದಣಿ

17. ವಿದೇಶಿ ವಿವಾಹಗಳ ನೋಂದಣಿ:- (1) (ಎ) ಪಕ್ಷಕಾರರಲ್ಲಿ ಕಡೇಪಕ್ಷ ಒಬ್ಬರು ಭಾರತೀಯರಾಗಿದ್ದು, ವಿವಾಹವನ್ನು ವಿದೇಶದಲ್ಲಿ ಆ ದೇಶದ ಕಾನೂನಿಗನುಸಾರವಾಗಿ ವಿಧಿವತ್ತಾಗಿ ನೆರವೇರಿಸಲಾಗಿದೆಯೆಂದು ವಿವಾಹಾಧಿಕಾರಿಗೆ ಮನದಟ್ಟಾದರೆ; ಮತ್ತು

(ಬಿ) ವಿವಾಹದ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು, ಈ ಪ್ರಕರಣದ ಮೇರೆಗೆ ವಿವಾಹವನ್ನು ನೋಂದಾಯಿಸಬೇಕೆಂದು ಲಿಖಿತದಲ್ಲಿ ವಿವಾಹಾಧಿಕಾರಿಗೆ ತಿಳಿಸಿದರೆ

- ವಿವಾಹಾಧಿಕಾರಿಯು, ನಿಯಮಿಸಲಾದ ಫೀಜು ಸಂದಾಯವಾದ ಮೇಲೆ ವಿವಾಹವನ್ನು ನೋಂದಾಯಿಸಬಹುದು.

(2) 4ನೇ ಪ್ರಕರಣದಲ್ಲಿ ನಮೂದಿಸಿರುವ ಷರತ್ತುಗಳನ್ನು ವಿವಾಹದ ನೋಂದಣಿಯ ಕಾಲದಲ್ಲಿ ಪೂರೈಸಿದ್ದ ಹೊರತು ಈ ಪ್ರಕರಣದ ಮೇರೆಗೆ ಯಾವುದೇ ವಿವಾಹವನ್ನು ನೋಂದಾಯಿಸತಕ್ಕದ್ದಲ್ಲ.

(3) ವಿವಾಹವು ಅಂತಾರಾಷ್ಟ್ರೀಯ ಕಾನೂನು ಅಥವಾ ರಾಷ್ಟ್ರಗಳ ಸೌಹಾರ್ದಕ್ಕೆ ಅಸಂಗತವಾಗಿದೆಯೆಂದು ವಿವಾಹಾಧಿಕಾರಿಯು ಅಭಿಪ್ರಾಯಪಟ್ಟರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಈ ಪ್ರಕರಣದ ಮೇರೆಗೆ ವಿವಾಹವನ್ನು ನೋಂದಾಯಿಸಲು ನಿರಾಕರಿಸಬಹುದು.

(4) ವಿವಾಹಾಧಿಕಾರಿಯು, ಈ ಪ್ರಕರಣದ ಮೇರೆಗೆ ವಿವಾಹವನ್ನು ನೋಂದಾಯಿಸಲು ನಿರಾಕರಿಸಿದಾಗ, ನೋಂದಣಿಗೆ ಅರ್ಜಿ ಸಲ್ಲಿಸುವ ಪಕ್ಷಕಾರರು ಯಾರಾದರೂ ಒಬ್ಬರು ಅಂಥ ನಿರಾಕರಣೆಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ನಿಯಮಿಸಲಾದ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಕೇಂದ್ರ ಸರ್ಕಾರವು ಕೈಗೊಂಡ ತೀರ್ಮಾನಕ್ಕನುಸಾರವಾಗಿ ವಿವಾಹಾಧಿಕಾರಿಯು ಕ್ರಮ ಕೈಗೊಳ್ಳತಕ್ಕದ್ದು.

(5) ವಿವಾಹ ಪ್ರಮಾಣ ಪತ್ರವನ್ನು ನಿಯಮಿಸಲಾದ ನಮೂನೆಯಲ್ಲಿ ಮತ್ತು ನಿಯಮಿಸಲಾದ ರೀತಿಯಲ್ಲಿ ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿ ನಮೂದಿಸುವುದರ ಮೂಲಕ ವಿವಾಹಾಧಿಕಾರಿಯು ಈ ಪ್ರಕರಣದ ಮೇರೆಗಿನ ವಿವಾಹವನ್ನು ನೋಂದಾಯಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರಕ್ಕೆ ವಿವಾಹದ ಪಕ್ಷಕಾರರು ಮತ್ತು ಮೂವರು ಸಾಕ್ಷಿದಾರರು ಸಹಿ ಮಾಡತಕ್ಕದ್ದು.

(6) ಈ ಪ್ರಕರಣದ ಮೇರೆಗೆ ನೋಂದಾಯಿಸಿದ ವಿವಾಹವನ್ನು, ನೋಂದಣಿಯ ದಿನಾಂಕದಿಂದ, ಈ ಅಧಿನಿಯಮದ ಮೇರೆಗೆ ವಿಧಿವತ್ತಾಗಿ ನೆರವೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

## ಅಧ್ಯಾಯ - IV

## ವಿದೇಶಿ ವಿವಾಹಗಳ ಸಂಬಂಧದಲ್ಲಿ ವೈವಾಹಿಕ ಪರಿಹಾರಗಳು

18. 1954ರ ವಿಶೇಷ ವಿವಾಹ ಅಧಿನಿಯಮದ ಮೇರೆಗೆ ಇರಬೇಕಾದ ವೈವಾಹಿಕ ಪರಿಹಾರಗಳು:- (1) ಈ ಪ್ರಕರಣದಲ್ಲಿ ಅಡಕವಾಗಿರುವ ಇತರ ಉಪಬಂಧಗಳಿಗೆ ಒಳಪಟ್ಟು, ವಿಶೇಷ ವಿವಾಹ ಅಧಿನಿಯಮ, 1954 (1954ರ 43)ರ IV, V, VI ಮತ್ತು VIIನೇ ಅಧ್ಯಾಯಗಳ ಉಪಬಂಧಗಳು, ಆ ಅಧಿನಿಯಮದ ಮೇರೆಗೆ ವಿಧಿವತ್ತಾಗಿ ನೆರವೇರಿಸಲಾದ ವಿವಾಹಗಳ ಸಂಬಂಧದಲ್ಲಿ ಅನ್ವಯವಾಗುವಂತೆಯೇ, ಈ ಅಧಿನಿಯಮದ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳಿಗೆ ಮತ್ತು ಪಕ್ಷಕಾರರಲ್ಲಿ ಯಾರಾದರೊಬ್ಬರು ಭಾರತದ ನಾಗರಿಕರಾಗಿದ್ದು ಅವರ ನಡುವೆ ವಿದೇಶದಲ್ಲಿ ವಿಧಿವತ್ತಾಗಿ ನೆರವೇರಿಸುವ ಯಾವುದೇ ಇತರ ವಿವಾಹಕ್ಕೆ ಅವು ಅನ್ವಯವಾಗತಕ್ಕದ್ದು.

ವಿವರಣೆ:- ಈ ಉಪಪ್ರಕರಣದಲ್ಲಿ ಉಲ್ಲೇಖಿತವಾದ ವಿವಾಹಗಳಿಗೆ ವಿಶೇಷ ವಿವಾಹ ಅಧಿನಿಯಮ, 1954ರ 24ನೇ ಪ್ರಕರಣವನ್ನು ಅನ್ವಯಿಸುವಲ್ಲಿ, ಅದು ಈ ಕೆಳಕಂಡ ಮಾರ್ಪಾಟುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ:-

(i) ಆ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅದರ (ಎ), (ಬಿ), (ಸಿ) ಮತ್ತು (ಡಿ) ಖಂಡದ ಉಲ್ಲೇಖವನ್ನು ಕ್ರಮವಾಗಿ ಈ ಅಧಿನಿಯಮದ 4ನೇ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು; ಮತ್ತು

(ii) ಮೇಲೆ ಹೇಳಿದ 24ನೇ ಪ್ರಕರಣದಲ್ಲಿ ಇರುವುದು ಯಾವುದೂ,-

(ಎ) ಈ ಅಧಿನಿಯಮದ ಮೇರೆಗೆ ವಿಧಿವತ್ತಾಗಿ ನೆರವೇರಿಸಿಲ್ಲದ; ಅಥವಾ

(ಬಿ) 17ನೇ ಪ್ರಕರಣದಲ್ಲಿ ಇರುವ ಉಪಬಂಧಗಳ ಕಾರಣದಿಂದಾಗಿ ಈ ಅಧಿನಿಯಮದ ಮೇರೆಗೆ ಅದನ್ನು ವಿಧಿವತ್ತಾಗಿ ನೆರವೇರಿಸಲಾಗಿದೆಯೆಂದು ಭಾವಿಸಿರುವ

- ಯಾವುದೇ ವಿವಾಹಕ್ಕೆ ಅನ್ವಯಿಸತಕ್ಕದ್ದಲ್ಲ:

ಪರಂತು, (ಬಿ) ಉಪಖಂಡದಲ್ಲಿ ಉಲ್ಲೇಖಿತವಾದಂಥ ಯಾವುದೇ ವಿವಾಹದ ನೋಂದಣಿಯು 17ನೇ ಪ್ರಕರಣದ (2)ನೇ ಉಪಪ್ರಕರಣವನ್ನು ಉಲ್ಲಂಘಿಸಿದ್ದರೆ, ಪರಿಣಾಮಕಾರಿಯಾಗಿರತಕ್ಕದ್ದಲ್ಲವೆಂದು ಘೋಷಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ವಿವಾಹಗಳಿಗೆ ಅನ್ವಯಿಸುವಂತೆ ಮಾಡಿದ ವಿಶೇಷ ವಿವಾಹ ಅಧಿನಿಯಮ, 1954 (1954ರ 43)ರ Vನೇ ಅಧ್ಯಾಯ ಅಥವಾ VIನೇ ಅಧ್ಯಾಯದ ಮೇರೆಗೆ ಪರಿಹಾರಕ್ಕಾಗಿ ಸಲ್ಲಿಸಲಾಗುವ ಪ್ರತಿಯೊಂದು ಅರ್ಜಿಯನ್ನು,-

(ಎ) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಪ್ರತಿವಾದಿಯು ವಾಸಿಸುತ್ತಿರುವ; ಅಥವಾ

(ಬಿ) ಪತಿ ಮತ್ತು ಪತ್ನಿ ಕೊನೆಯದಾಗಿ ಒಟ್ಟಿಗೆ ವಾಸ ಮಾಡಿದ; ಅಥವಾ

(ಸಿ) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಅರ್ಜಿದಾರನು ವಾಸಿಸುತ್ತಿರುವ, ಆದರೆ ಪ್ರತಿವಾದಿಯು ಆ ಕಾಲದಲ್ಲಿ ಭಾರತದ ಹೊರಗೆ ವಾಸಿಸುತ್ತಿದ್ದರೂ ಕೂಡ

- ಸ್ಥಳೀಯ ಪರಿಮಿತಿಯ ಮೇಲೆ ಸಾಮಾನ್ಯ ಸಿವಿಲ್ ಅಧಿಕಾರ ವ್ಯಾಪ್ತಿಯುಳ್ಳ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಬಹುದು.

ವಿವರಣೆ:- ಈ ಪ್ರಕರಣದಲ್ಲಿ "ಜಿಲ್ಲಾ ನ್ಯಾಯಾಲಯ"ವು ವಿಶೇಷ ವಿವಾಹ ಅಧಿನಿಯಮ, 1954 (1954ರ 43) ರಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

(3) ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) (i) ವಿವಾಹದ ಪಕ್ಷಕಾರರು ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಭಾರತದ ಅಧಿವಾಸಿಗಳಾಗಿದ್ದ ಹೊರತು; ಅಥವಾ

(ii) ಅರ್ಜಿದಾರ ಪತ್ನಿಯಾಗಿದ್ದು, ವಿವಾಹಕ್ಕೆ ನಿಕಟಪೂರ್ವದಲ್ಲಿ ಭಾರತದ ಅಧಿವಾಸಿಯಾಗಿದ್ದು, ಅರ್ಜಿಯನ್ನು ಸಲ್ಲಿಸುವುದಕ್ಕೆ ನಿಕಟಪೂರ್ವದಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯವರೆಗೆ ಭಾರತದಲ್ಲಿ ವಾಸಿಸುತ್ತಿದ್ದ ಹೊರತು

- ವಿವಾಹದ ವಿಘಟನೆಯ ಯಾವುದೇ ಡಿಕ್ರಿಯನ್ನು ಮಾಡಲು;

(ಬಿ) (i) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ವಿವಾಹದ ಪಕ್ಷಕಾರರು ಭಾರತದ ಅಧಿವಾಸಿಗಳಾಗಿದ್ದ ಹೊರತು; ಅಥವಾ

(ii) ಈ ಅಧಿನಿಯಮದ ಮೇರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ್ದು, ಅರ್ಜಿದಾರಳು ಪತ್ನಿಯಾಗಿದ್ದು, ಅರ್ಜಿಯನ್ನು ಸಲ್ಲಿಸುವ ನಿಕಟಪೂರ್ವದ ಮೂರು ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದ ಹೊರತು

- ಅನೂರ್ಜಿತಗೊಳಿಸಬಹುದಾದ ವಿವಾಹವನ್ನು ರದ್ದುಮಾಡುವ ಯಾವುದೇ ಡಿಕ್ರಿಯನ್ನು ಮಾಡಲು;

(ಸಿ) (i) ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬರು ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಭಾರತದಲ್ಲಿ ವಾಸವಾಗಿದ್ದ ಹೊರತು; ಅಥವಾ

(ii) ಈ ಅಧಿನಿಯಮದ ಮೇರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ್ದು, ಅರ್ಜಿದಾರನು ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಭಾರತದಲ್ಲಿ ವಾಸಿಸುತ್ತಿರುವ ಹೊರತು

- ಅನೂರ್ಜಿತ ವಿವಾಹದ ಸಂಬಂಧದಲ್ಲಿ ವಿವಾಹವನ್ನು ರದ್ದುಗೊಳಿಸುವ ಯಾವುದೇ ಡಿಕ್ರಿಯನ್ನು ಮಾಡಲು,-

(ಡಿ) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಅರ್ಜಿದಾರನು ಭಾರತದಲ್ಲಿ ವಾಸಿಸುತ್ತಿರುವ ಹೊರತು, ವಿಶೇಷ ವಿವಾಹ ಅಧಿನಿಯಮ, 1954 (1954ರ 43)ರ Vನೇ ಅಧ್ಯಾಯದ ಅಥವಾ VIನೇ ಅಧ್ಯಾಯದ ಮೇರೆಗೆ ಇತರ ಯಾವುದೇ ಪರಿಹಾರವನ್ನು ಮಂಜೂರು ಮಾಡಲು

- ಯಾವುದೇ ನ್ಯಾಯಾಲಯವನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(4) ವಿಶೇಷ ವಿವಾಹ ಅಧಿನಿಯಮ, 1954 (1954ರ 43) ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಆಧಾರದ ಮೇಲಾಗಲಿ ಅಥವಾ ಅನ್ಯಥಾ ವಿದೇಶದಲ್ಲಿ ವಿಧಿವತ್ತಾಗಿ ನೆರವೇರಿಸಿಲ್ಲದ ಯಾವುದೇ ವಿವಾಹದ ಸಂಬಂಧದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಪರಿಹಾರವನ್ನು ಮಂಜೂರು ಮಾಡಲು ಉಪಬಂಧ ಕಲ್ಪಿಸಿದ್ದರೆ ಈ ಅಧಿನಿಯಮದ ಮೇರೆಗೆ ಅಂಥ ಯಾವುದೇ ವಿವಾಹದ ಸಂಬಂಧದಲ್ಲಿ ಯಾವುದೇ ಪರಿಹಾರವನ್ನು ಮಂಜೂರು ಮಾಡಲು (1)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ ಯಾವುದೇ ನ್ಯಾಯಾಲಯವನ್ನು ಅಧಿಕೃತಗೊಳಿಸತಕ್ಕದ್ದಲ್ಲ.

## ಅಧ್ಯಾಯ - V

## ದಂಡನೆಗಳು

19. ದ್ವಿಪತಿತ್ವ ದ್ವಿಪತ್ನಿತ್ವಕ್ಕಾಗಿ ದಂಡನೆ:- (1) ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ವಿವಾಹವು ವಿಧಿವತ್ತಾಗಿ ನೆರವೇರಿದೆಯೋ ಅಥವಾ ನೆರವೇರಿದೆಯೆಂದು ಭಾವಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ತನ್ನ ವಿವಾಹವು ಅಸ್ತಿತ್ವದಲ್ಲಿರುವಾಗ ಭಾರತದಲ್ಲಿ ಇತರ ಯಾವುದೇ ವಿವಾಹವನ್ನು ಮಾಡಿಕೊಂಡರೆ ಅವನು, ಭಾರತ ದಂಡ ಸಂಹಿತೆ, 1860 (1860ರ 45)ರ 494ನೇ ಪ್ರಕರಣದಲ್ಲಿ ಮತ್ತು 495ನೇ ಪ್ರಕರಣದಲ್ಲಿ ಉಪಬಂಧಿಸಿದ ದಂಡನೆಗಳಿಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಮಾಡಿಕೊಂಡ ವಿವಾಹವು ಅನೂರ್ಜಿತವಾಗತಕ್ಕದ್ದು.

(2) ಭಾರತದ ಯಾರೇ ನಾಗರಿಕನು ಭಾರತದ ಹೊರಗೆ ಮತ್ತು ಭಾರತದ ಆಚೆ ಮಾಡಿದ ಅಂಥ ಯಾವುದೇ ಅಪರಾಧಕ್ಕೂ ಸಹ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯಿಸುತ್ತವೆ.

20. ವಿವಾಹದ ಇತರ ಕೆಲವು ಷರತ್ತುಗಳ ಉಲ್ಲಂಘನೆಗೆ ದಂಡ:- 4ನೇ ಪ್ರಕರಣದ (ಸಿ) ಖಂಡದಲ್ಲಿ ಅಥವಾ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತನ್ನು ಉಲ್ಲಂಘಿಸಿ ಈ ಅಧಿನಿಯಮದ ಮೇರೆಗೆ ಅವನ ಅಥವಾ ಅವಳ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿಕೊಳ್ಳುವ ಭಾರತದ ಯಾರೇ ನಾಗರಿಕನು,-

(ಎ) 4ನೇ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತಿನ ಉಲ್ಲಂಘನೆಯ ಸಂದರ್ಭದಲ್ಲಿ, ಹದಿನೈದು ದಿನಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ; ಮತ್ತು

(ಬಿ) 4ನೇ ಪ್ರಕರಣದ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತಿನ ಉಲ್ಲಂಘನೆಯ ಸಂದರ್ಭದಲ್ಲಿ, ಹದಿನೈದು ದಿನಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ

- ದಂಡನೀಯನಾಗತಕ್ಕದ್ದು.

21. ಸುಳ್ಳು ಘೋಷಣೆಗಾಗಿ ದಂಡ:- ವಿವಾಹ ನೆರವೇರಿಸಿಕೊಳ್ಳುವ ಉದ್ದೇಶಕ್ಕಾಗಿ ಭಾರತದ ಯಾರೇ ನಾಗರಿಕನು ಉದ್ದೇಶಪೂರ್ವಕವಾಗಿ,-

(ಎ) ಈ ಅಧಿನಿಯಮದ ಮೇರೆಗೆ ಘೋಷಣೆಯು ಅಗತ್ಯವಿರುವಾಗ, ಸುಳ್ಳು ಘೋಷಣೆಯನ್ನು ಮಾಡಿದರೆ, ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ನೋಟೀಸು ಅಥವಾ ಪ್ರಮಾಣಪತ್ರ ಅಗತ್ಯವಿರುವಾಗ, ಸುಳ್ಳು ನೋಟೀಸಿಗೆ ಅಥವಾ ಪ್ರಮಾಣಪತ್ರಕ್ಕೆ ಸಹಿ ಮಾಡಿದರೆ

- ಅವನು ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

22. ವಿವಾಹಾಧಿಕಾರಿಯ ದೋಷಪೂರ್ಣ ಕೃತ್ಯಕ್ಕೆ ದಂಡ:- ಯಾರೇ ವಿವಾಹಾಧಿಕಾರಿಯು ತಿಳಿದೂ ತಿಳಿದೂ, ಉದ್ದೇಶ ಪೂರ್ವಕವಾಗಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಈ ಅಧಿನಿಯಮದ ಮೇರೆಗೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

## ಅಧ್ಯಾಯ - VI

### ಸಂಕೀರ್ಣ

23. ಇತರ ದೇಶಗಳ ಕಾನೂನಿನ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳಿಗೆ ಮನ್ನಣೆ:- ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕಾಗಿ ಯಾವುದೇ ವಿದೇಶದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಈ ಅಧಿನಿಯಮದಲ್ಲಿ ಒಳಗೊಂಡಿರುವಂಥವೇ ಉಪಬಂಧಗಳು ಇವೆಯೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ವಿದೇಶದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳನ್ನು ಸಿಂಧುವಾದವುಗಳೆಂದು ಭಾರತದಲ್ಲಿನ ನ್ಯಾಯಾಲಯಗಳು ಮಾನ್ಯ ಮಾಡತಕ್ಕದ್ದೆಂದು ಘೋಷಿಸಬಹುದು.

24. ವಿದೇಶದಲ್ಲಿ ಸ್ಥಳೀಯ ಕಾನೂನಿಗೆ ಅನುಸಾರವಾಗಿ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳ ದಸ್ತಾವೇಜುಗಳ ಪ್ರಮಾಣೀಕರಣ:- (1) (ಎ) ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ವಿದೇಶದಲ್ಲಿ ಆ ದೇಶದ ಕಾನೂನಿಗನುಸಾರವಾಗಿ ಕಡೇಪಕ್ಷ ಒಬ್ಬರು ಭಾರತದ ನಾಗರಿಕರಾಗಿರುವ ಪಕ್ಷಕಾರರ ನಡುವೆ ವಿವಾಹವು ವಿಧಿವತ್ತಾಗಿ ನೆರವೇರಿರುವಲ್ಲಿ, ಮತ್ತು

(ಬಿ) ಅಂಥ ನಾಗರಿಕನಾಗಿರುವ ವಿವಾಹದ ಪಕ್ಷಕಾರನ ಪೈಕಿ ಯಾರೇ ಒಬ್ಬರು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ ದೇಶದಲ್ಲಿನ ವಿವಾಹಾಧಿಕಾರಿಗೆ,-

(i) ಆ ದೇಶದ ವಿವಾಹ ರಿಜಿಸ್ಟರಿನಲ್ಲಿರುವ ಆ ವಿವಾಹಕ್ಕೆ ಸಂಬಂಧಿಸಿದ ನಮೂದಿನ ಪ್ರತಿಯನ್ನು, ಆ ದೇಶದ ಸಮುಚಿತ ಪ್ರಾಧಿಕಾರಿಯು ಪ್ರಮಾಣೀಕರಿಸಿದ ನಮೂದಿನ ಯಥಾ ಪ್ರತಿಯೆಂದು; ಮತ್ತು

(ii) ಆ ನಮೂದಿನ ಪ್ರತಿಯು ಇಂಗ್ಲಿಷ್ ಭಾಷೆಯಲ್ಲಿಲ್ಲದಿದ್ದರೆ, ನಿಯಮಿಸಲಾದ ಭಾಷೆಯಲ್ಲಿ ಆ ಪ್ರತಿಯ ಭಾಷಾಂತರವನ್ನು

- ಹಾಜರುಪಡಿಸಿದರೆ; ಮತ್ತು

(ಸಿ) ವಿವಾಹಾಧಿಕಾರಿಗೆ, ವಿವಾಹ ರಿಜಿಸ್ಟರಿನಲ್ಲಿರುವ ನಮೂದಿನ ಆ ಪ್ರತಿಯು ಯಥಾ ಪ್ರತಿಯಾಗಿದೆಯೆಂದು ಮತ್ತು ಭಾಷಾಂತರವು, ಯಾವುದಾದರೂ ಇದ್ದರೆ, ಅದು ಯಥಾ ಭಾಷಾಂತರವೆಂದು ಮನವರಿಕೆಯಾದರೆ

- ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ ವಿವಾಹಾಧಿಕಾರಿಯು ಆ ಪ್ರತಿಯ ಮೇಲೆ ವಿವಾಹ ರಿಜಿಸ್ಟರಿನಲ್ಲಿಯ ನಮೂದಿನ ಪ್ರತಿಯು ಯಥಾ ಪ್ರತಿಯೆಂದು ತನಗೆ ಮನವರಿಕೆಯಾಗಿದೆಯೆಂದು ಮತ್ತು ಭಾಷಾಂತರದ ಪ್ರತಿಯ ಮೇಲೆ, ಅದು ಯಥಾ ಭಾಷಾಂತರವೆಂದು ತನಗೆ ಮನವರಿಕೆಯಾಗಿದೆಯೆಂದು ಪ್ರಮಾಣೀಕರಿಸತಕ್ಕದ್ದು ಮತ್ತು ಅವನು ಪಕ್ಷಕಾರನಿಗೆ ಪ್ರತಿಯನ್ನು ಮತ್ತು ಭಾಷಾಂತರವನ್ನು ಕೊಡತಕ್ಕದ್ದು.

(2) ವಿದೇಶದಲ್ಲಿ ನೆರವೇರಿಸಿದ ವಿವಾಹಕ್ಕೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದ ಮೇರೆಗೆ ಕೊಡಲಾದ ದಸ್ತಾವೇಜನ್ನು, ವಿದೇಶದ ಸಮುಚಿತ ಪ್ರಾಧಿಕಾರವು ಕ್ರಮಬದ್ಧವಾಗಿ ಕೊಟ್ಟ ಪ್ರಮಾಣಪತ್ರವೆಂಬಂತೆ ಯಾವುದೇ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

25. ನಮೂದುಗಳ ಪ್ರಮಾಣಿತ ಪ್ರತಿಯು ಸಾಕ್ಷ್ಯವಾಗಿರುವುದು:- ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿ ವಿವಾಹದ ನಮೂದಿನ ಬಗ್ಗೆ ವಿವಾಹಾಧಿಕಾರಿಯು ಸಹಿ ಮಾಡಿರುವನೆಂದು ತಾತ್ಪರ್ಯವಾಗುವ ಪ್ರತಿಯೊಂದು ಪ್ರಮಾಣಿತ ಪ್ರತಿಯನ್ನು, ಮೂಲ ಪ್ರತಿಯನ್ನು ಹಾಜರುಪಡಿಸಬೇಕೆಂದು ಅಥವಾ ಮೂಲಪ್ರತಿಯ ಬಗ್ಗೆ ರುಜುವಾತು ಕೇಳದೆಯೇ ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು.

26. ತಪ್ಪುಗಳನ್ನು ಸರಿಪಡಿಸುವುದು:- (1) ಯಾರೇ ವಿವಾಹಾಧಿಕಾರಿಯು, ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿ ಯಾವುದೇ ನಮೂದನ್ನು ಮಾಡಿರುವ ರೀತಿಯಲ್ಲಿ ಅಥವಾ ಸಾರಾಂಶದಲ್ಲಿ ಯಾವುದೇ ತಪ್ಪನ್ನು ಕಂಡುಹಿಡಿದರೆ, ಅವನು ಅಂಥ ತಪ್ಪನ್ನು ಕಂಡುಹಿಡಿದ ತರುವಾಯದ ಒಂದು ತಿಂಗಳಿನೊಳಗೆ ಹಾಗೆ ವಿವಾಹಿತರಾದ ವ್ಯಕ್ತಿಗಳ ಸಮ್ಮುಖದಲ್ಲಿ ಅಥವಾ ಅವರ ಮರಣ ಅಥವಾ ಗೈರುಹಾಜರಿಯ ಸಂದರ್ಭದಲ್ಲಿ, ಇತರ ಇಬ್ಬರು ಸಾಕ್ಷಿದಾರರ ಸಮ್ಮುಖದಲ್ಲಿ, ಮೂಲ ನಮೂದಿನಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಪಕ್ಕದ ಅಂಚಿನಲ್ಲಿ ನಮೂದು ಮಾಡುವ ಮೂಲಕ ತಪ್ಪನ್ನು ಸರಿಪಡಿಸಬಹುದು ಮತ್ತು ಹಾಗೆ ಸರಿಪಡಿಸಿದ ದಿನಾಂಕವನ್ನು ಅಲ್ಲಿ ನಮೂದಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ತಿದ್ದುಪಾಟನ್ನು, ಯಾವ ಸಾಕ್ಷಿದಾರರ ಸಮ್ಮುಖದಲ್ಲಿ ಅದನ್ನು ಮಾಡಲಾಯಿತೋ ಆ ಸಾಕ್ಷಿದಾರರು ಅದನ್ನು ದೃಢೀಕರಿಸತಕ್ಕದ್ದು.

27. ಈ ಅಧಿನಿಯಮಕ್ಕೆ ಅನುಸಾರವಾಗಿ ನೆರವೇರಿದ ವಿವಾಹಗಳ ಸಿಂಧುತ್ವಕ್ಕೆ ಈ ಅಧಿನಿಯಮವು ಬಾಧಕವಾಗದಿರುವುದು:- ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಮೇರೆಗಲ್ಲದೆ, ಅನ್ಯಥಾ ವಿದೇಶದಲ್ಲಿ ವಿಧಿವತ್ತಾಗಿ ನೆರವೇರಿರುವ ವಿವಾಹದ ಸಿಂಧುತ್ವವನ್ನು ಯಾವ ವಿಧದಲ್ಲೂ ಬಾಧಿಸತಕ್ಕದ್ದಲ್ಲ.

28. ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಆ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ವಿವಾಹಾಧಿಕಾರಿಗಳ ಕರ್ತವ್ಯಗಳು ಮತ್ತು ಅಧಿಕಾರಗಳು ಮತ್ತು ಅವರ ಜಿಲ್ಲೆಗಳು;

(ಬಿ) ವಿವಾಹಾಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸಬಹುದಾದ ರೀತಿ;

(ಸಿ) ವಿವಾಹದ ನೋಟೀಸುಗಳನ್ನು ಪ್ರಕಟಿಸತಕ್ಕ ರೀತಿ;

(ಡಿ) ಈ ಅಧಿನಿಯಮದ ಮೇರೆಗೆ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸಬಹುದಾದ ಸ್ಥಳಗಳು ಮತ್ತು ಸಮಯ;

(ಇ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯವಾಗಿ ಇಡಬೇಕಾದ ಯಾವುವೇ ಪುಸ್ತಕಗಳನ್ನು ನಿರ್ವಹಿಸತಕ್ಕ ನಮೂನೆ ಮತ್ತು ರೀತಿ;

(ಎಫ್) ವಿವಾಹ ಪ್ರಮಾಣಪತ್ರಗಳನ್ನು 17ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ನಮೂದಿಸಬಹುದಾದ ನಮೂನೆ ಮತ್ತು ರೀತಿ;

(ಜಿ) ಈ ಅಧಿನಿಯಮದ ಮೇರೆಗೆ ವಿವಾಹಾಧಿಕಾರಿಗೆ ವಿಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ, ವಿಧಿಸಬಹುದಾದ ಫೀಜು;

(ಹೆಚ್) ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿರುವ ನಮೂದುಗಳ ಪ್ರತಿಗಳನ್ನು ಯಾವ ಪ್ರಾಧಿಕಾರಗಳಿಗೆ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಮಧ್ಯಂತರಗಳಲ್ಲಿ ಕಳುಹಿಸಬೇಕು ಮತ್ತು ವಿವಾಹ ಪ್ರಮಾಣಪತ್ರ ಪುಸ್ತಕದಲ್ಲಿ ತಿದ್ದುಪಾಟುಗಳನ್ನು ಮಾಡಿದಾಗ ಅಂಥ ತಿದ್ದುಪಾಟುಗಳ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಗಳಿಗೆ ಕಳುಹಿಸಬೇಕಾದ ವಿಧಾನ;

(ಐ) ಈ ಅಧಿನಿಯಮದ ಮೇರೆಗೆ ಅಗತ್ಯವಾಗಿ ಇಡಬೇಕಾದ ಯಾವುವೇ ಪುಸ್ತಕಗಳ ಪರಿಶೀಲನೆ ಮತ್ತು ಅದರಲ್ಲಿರುವ ನಮೂದುಗಳ ಪ್ರಮಾಣಿತ ಪ್ರತಿಯನ್ನು ಒದಗಿಸುವುದು;

(ಜೆ) ಯಾವುದೇ ವಿವಾಹಕ್ಕೆ ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು 23ನೇ ಪ್ರಕರಣದ ಮೇರೆಗೆ ಮನ್ನಣೆ ನೀಡಬಹುದೋ ಆ ರೀತಿ ಮತ್ತು ಷರತ್ತುಗಳು;

(ಕೆ) ನಿಯಮಿಸಬಹುದಾದ ಅಥವಾ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ನಿರಂತರ ಅಧಿವೇಶನಗಳಿಗೆ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

29. 1954ರ 43ನೇ ಅಧಿನಿಯಮದ ತಿದ್ದುಪಡಿ:- ವಿಶೇಷ ವಿವಾಹ ಅಧಿನಿಯಮ, 1954 ರಲ್ಲಿ,-

(ಎ) 1ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಸದರಿ ರಾಜ್ಯಕ್ಷೇತ್ರಗಳ ಹೊರಗೆ" ಎಂಬ ಪದಗಳಿಗೆ ಬದಲಾಗಿ "ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿರತಕ್ಕ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) 2ನೇ ಪ್ರಕರಣದಲ್ಲಿನ (ಎ) ಮತ್ತು (ಸಿ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) 3ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಬದಲಾಗಿ, ಈ ಕೆಳಕಂಡ ಉಪಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಲ್ಲಿ ಅಧಿವಾಸಿಗಳಾಗಿದ್ದು, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಇರುವ ಭಾರತದ ನಾಗರಿಕರಿಗೆ ಈ ಅಧಿನಿಯಮವನ್ನು ಅನ್ವಯ ಮಾಡುವಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಭಾವಿಸಬಹುದಾದ ಕೇಂದ್ರ ಸರ್ಕಾರದ ಅಧಿಕಾರಿಗಳನ್ನು, ಆ ರಾಜ್ಯಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ವಿವಾಹಾಧಿಕಾರಿಗಳೆಂದು ನಿರ್ದಿಷ್ಟಪಡಿಸಬಹುದು."

(ಡಿ) 4ನೇ ಪ್ರಕರಣದಲ್ಲಿ (ಇ) ಖಂಡಕ್ಕೆ ಬದಲಾಗಿ, ಈ ಕೆಳಕಂಡ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(ಇ) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿರುವಲ್ಲಿ, ಉಭಯ ಪಕ್ಷಕಾರರು ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಅಧಿವಾಸಿಗಳಾಗಿದ್ದು, ಭಾರತದ ನಾಗರಿಕರಾಗಿರಬೇಕು";

(ಇ) 10ನೇ ಪ್ರಕರಣದಲ್ಲಿ "ಸದರಿ ರಾಜ್ಯಕ್ಷೇತ್ರಗಳ ಹೊರಗೆ ಉದ್ದೇಶಿತ ವಿವಾಹಗಳ ಸಂಬಂಧದಲ್ಲಿ ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಹೊರಗೆ" ಎಂಬ ಪದಗಳಿಗೆ ಬದಲಾಗಿ, "ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ನೆರವೇರಿಸಲು ಉದ್ದೇಶಿಸಿದ ವಿವಾಹಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿನ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಫ್) 50ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ರಾಜತಾಂತ್ರಿಕ ಮತ್ತು ಕೌನ್ಸಲರ್ ಅಧಿಕಾರಿಗಳು ಮತ್ತು ಇತರರು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

30. ನಿರಸನ:- ಭಾರತೀಯ ವಿದೇಶಿ ವಿವಾಹ ಅಧಿನಿಯಮ, 1903 (1903ರ 14) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

## ಮೊದಲನೇ ಅನುಸೂಚಿ

(5ನೇ ಪ್ರಕರಣವನ್ನು ನೋಡಿ)

### ಉದ್ದೇಶಿತ ವಿವಾಹದ ನೋಟೀಸಿನ ನಮೂನೆ

ವಿವಾಹಾಧಿಕಾರಿಗೆ,
.......................
.......................
.......................

ವಿದೇಶಿ ವಿವಾಹ ಅಧಿನಿಯಮ, 1969ರ ಮೇರೆಗೆ ಈ ದಿನಾಂಕದಿಂದ ಮೂರು ತಿಂಗಳೊಳಗೆ ನಾವು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿಕೊಳ್ಳಲು ಉದ್ದೇಶಿಸಿದ್ದೇವೆಂದು ನಾವು ಈ ಮೂಲಕ ತಮಗೆ ನೋಟೀಸನ್ನು ನೀಡಿದ್ದೇವೆ.

| ಹೆಸರು ಮತ್ತು ತಂದೆಯ ಹೆಸರು | ಸ್ಥಿತಿ | ವೃತ್ತಿ | ಜನನ ದಿನಾಂಕ | ವಾಸ - ಸ್ಥಳ | ಖಾಯಂ ವಾಸಸ್ಥಳ ಮತ್ತು ಖಾಯಂ ವಾಸಸ್ಥಳ ಇಲ್ಲದಿದ್ದರೆ ಸದ್ಯದ ವಾಸಸ್ಥಳ | ಸದ್ಯದ ವಾಸಸ್ಥಳದಲ್ಲಿ ವಾಸ ಮಾಡಿದ ಅವಧಿ |
|---|---|---|---|---|---|---|
| | ವರ - ಅವಿವಾಹಿತ<br>ವಿಧುರ<br>ವಿವಾಹ ವಿಚ್ಛೇದಿತ | | | | | |
| | ವಧು - ಅವಿವಾಹಿತೆ<br>ವಿಧವೆ<br>ವಿವಾಹ ವಿಚ್ಛೇದಿತೆ | | | | | |

................ ಇಸವಿಯ ......................... ತಿಂಗಳ ........................... ದಿನಾಂಕದಂದು ಇದಕ್ಕೆ ಸಾಕ್ಷಿಯಾಗಿ ನಾವು ಸಹಿ ಮಾಡಿದ್ದೇವೆ.

ಸಹಿ: ವರ.......................
ಸಹಿ: ವಧು......................

## ಎರಡನೇ ಅನುಸೂಚಿ

(12ನೇ ಪ್ರಕರಣವನ್ನು ನೋಡಿ)

### ವರನು ಮಾಡಬೇಕಾದ ಘೋಷಣೆ

...................... ಎಂಬ ಹೆಸರಿನ ನಾನು, ಈ ಮೂಲಕ ಈ ಕೆಳಕಂಡಂತೆ ಘೋಷಿಸುತ್ತೇನೆ:-

1. ನಾನು ಸದ್ಯ ಅವಿವಾಹಿತ / ವಿಧುರ / ವಿವಾಹ ವಿಚ್ಛೇದಿತ.
2. ನನಗೆ .................. ವರ್ಷ ವಯಸ್ಸು ತುಂಬಿದೆ.
3. ನಾನು ವಧುವಿಗೆ ನಿಷಿದ್ಧ ಬಾಂಧವ್ಯ ಶ್ರೇಣಿಯಲ್ಲಿ ಸಂಬಂಧಿಯಲ್ಲ.
4. ನಾನು .................. ದೇಶದ ನಾಗರಿಕನಾಗಿದ್ದೇನೆ.
5. ಈ ಘೋಷಣೆಯಲ್ಲಿನ ಯಾವುದೇ ಹೇಳಿಕೆಯು ಸುಳ್ಳಾಗಿದ್ದರೆ, ನಾನು ಕಾರಾವಾಸಕ್ಕೆ ಮತ್ತು ಜುಲ್ಮಾನೆಗೆ ಸಹ ಗುರಿಯಾಗುತ್ತೇನೆಂಬುದು ನನಗೆ ತಿಳಿದಿದೆ.

ವರನ ಸಹಿ: ..........................

## ವಧು ನೀಡಬೇಕಾದ ಘೋಷಣೆ

...................... ಎಂಬ ಹೆಸರಿನ ನಾನು, ಈ ಮೂಲಕ ಈ ಕೆಳಕಂಡಂತೆ ಘೋಷಿಸುತ್ತೇನೆ:-

1. ನಾನು ಸದ್ಯ ಅವಿವಾಹಿತೆ / ವಿಧವೆ / ವಿವಾಹ ವಿಚ್ಛೇದಿತೆ.
2. ನನಗೆ .................. ವರ್ಷ ವಯಸ್ಸು ತುಂಬಿದೆ.
3. ನಾನು ವರನಿಗೆ ನಿಷಿದ್ಧ ಬಾಂಧವ್ಯ ಶ್ರೇಣಿಯಲ್ಲಿ ಸಂಬಂಧಿಯಲ್ಲ.
4. ನಾನು .................. ದೇಶದ ನಾಗರಿಕಳು.
5. ಈ ಘೋಷಣೆಯಲ್ಲಿ ಯಾವುದೇ ಹೇಳಿಕೆಯು ಸುಳ್ಳಾಗಿದ್ದರೆ, ನಾನು ಕಾರಾವಾಸಕ್ಕೆ ಮತ್ತು ಜುಲ್ಮಾನೆಗೆ ಸಹ ಗುರಿಯಾಗುತ್ತೇನೆಂಬುದು ನನಗೆ ತಿಳಿದಿದೆ.

ವಧುವಿನ ಸಹಿ: ..........................

ಮೇಲೆ ಹೆಸರಿಸಿದ ವರ ಮತ್ತು ವಧು ಇಬ್ಬರೂ ನಮ್ಮ ಸಮ್ಮುಖದಲ್ಲಿ ಸಹಿ ಮಾಡಿದ್ದಾರೆ. ನಾವು ತಿಳಿದಿರುವಷ್ಟರ ಮಟ್ಟಿಗೆ ಈ ವಿವಾಹಕ್ಕೆ ಕಾನೂನಿನ ಯಾವ ಅಡಚಣೆಯೂ ಇಲ್ಲ.

ಮೂವರು ಸಾಕ್ಷಿದಾರರ ಸಹಿ:

1. .....................
2. .....................
3. .....................

ಮೇಲು ರುಜು ಮಾಡಿದೆ

ವಿವಾಹಾಧಿಕಾರಿಯ ಸಹಿ

............... ಇಸವಿಯ ................. ತಿಂಗಳ ................. ದಿನದಂದು ಇದಕ್ಕೆ ಸಹಿ ಮಾಡಲಾಗಿದೆ.

## ಮೂರನೇ ಅನುಸೂಚಿ

(14ನೇ ಪ್ರಕರಣವನ್ನು ನೋಡಿ)

## ವಿವಾಹ ಪ್ರಮಾಣ ಪತ್ರದ ನಮೂನೆ

...................... ಎಂಬ ಹೆಸರಿನ ನಾನು ................ ಇಸವಿಯ ............... ತಿಂಗಳ ............... ದಿನಾಂಕದಂದು ವರನಾದ .................... ಮತ್ತು ವಧುವಾದ .................... ಈ ಇಬ್ಬರೂ ನನ್ನ ಸಮಕ್ಷಮ ಹಾಜರಾಗಿ ವಿದೇಶಿ ವಿವಾಹ ಅಧಿನಿಯಮ, 1969ರ ............. ನೇ ಪ್ರಕರಣದ ಮೇರೆಗೆ (ನಮೂದಿಸಬೇಕು) ಮಾಡಬೇಕಾದ ಘೋಷಣೆಯನ್ನು ಯಥೋಚಿತ ರೀತಿಯಲ್ಲಿ ಮಾಡಿದ್ದಾರೆಂದು ಹಾಗೂ ನನ್ನ ಮತ್ತು ಈ ಕೆಳಗೆ ಸಹಿ ಮಾಡಿರುವ ಮೂವರು ಸಾಕ್ಷಿದಾರರ ಸಮ್ಮುಖದಲ್ಲಿ ಈ ಅಧಿನಿಯಮದ ಮೇರೆಗೆ ಅವರ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾಯಿತೆಂದು ಈ ಮೂಲಕ ಪ್ರಮಾಣೀಕರಿಸಿದ್ದೇನೆ.

ಸಹಿ: .......................
(ವಿವಾಹಾಧಿಕಾರಿ)

ಸಹಿ: ...................... (ವರ)

ಸಹಿ: ...................... (ವಧು)

ಮೂವರು ಸಾಕ್ಷಿದಾರರ ಸಹಿ:

1. ..........................

2. ..........................

3. ..........................

**ದಿನಾಂಕ .............. ಇಸವಿ .................... ತಿಂಗಳು.**

* * *